ಮೂಲ ದಾವಾ ನಂ. 87/2019

ಡಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 13-01-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎನ್. ಎಸ್. ಬಿ. ವಕೀಲರಿಂದಃ**

ನಾನು ಕುಮಟಾದ ನಿವಾಸಿಯಾಗಿರುತ್ತೇನೆ ಎಂದರೆ ಸರಿ. ನಾನು ನೌಕರಿ ಮಾಡುತ್ತಿದ್ದೆ ಎಂದರೆ ಸರಿ. ಆ ಸಮಯದಲ್ಲಿ ಹೊನ್ನಾವರದಲ್ಲೂ ಕೂಡ ಕೆಲಸ ಮಾಡಿದ್ದೇನೆ ಎಂದರೆ ಸರಿ. ಆ ರೀತಿ ಹೊನ್ನಾವರದಲ್ಲಿ ಕೆಲಸ ಮಾಡುತ್ತಿದ್ದಾಗ ತಾರಾಬಾಯಿರವರ ಮನೆಯಲ್ಲಿ ಬಾಡಿಗೆಗೆ ಇದ್ದೆ ಎಂದರೆ ಸರಿ. ನನಗೆ ಈಗ 69 ವರ್ಷ ವಯಸ್ಸಾಗಿದೆ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ 60-65 ವರ್ಷ ದಾಟಿದ ಮೇಲೆ ವಯೋವೃದ್ಧ ಕಾಯಿಲೆಗಳು ಬರುತ್ತವೆ ಎಂದರೆ ಸರಿ. ಆ ಸಮಯದಲ್ಲಿ ವಯಸ್ಸಾದವರು ತಮ್ಮ ಕಟುಂಬದವರ ಹತ್ತಿರ ಕೆಲಸ ಮಾಡಿಸುತ್ತಾರೆ ಎಂದರೆ ಸಾಕ್ಷಿ ಅವರು ಸುಮಾರು 70-72 ವರ್ಷಗಳವರೆಗೂ ತಮ್ಮ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಈಗ ನನಗೆ 69 ವರ್ಷಗಳಾಗಿದ್ದು ನಾನು ಅನಾರೋಗ್ಯದಿಂದ ಇದ್ದೇನೆ ಎಂದರೆ ಸರಿ . ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ 65 ವರ್ಷ ದಾಟಿದ ಮೇಲೆ ಮನಸ್ಥಿತಿ ಬದಲಾಗುತ್ತದೆ ಎಂದರೆ ಸರಿಯಲ್ಲ.

ನಾನು ನೌಕರಿ ಮಾಡುತ್ತಿದ್ದ ಕಾರಣ ನನಗೆ ಕಾನೂನಿನ ಬಗ್ಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ. ಯಾರಾದರೂ ಕಾನೂನಿನ ವಿರುದ್ಧ ಹೋದರೆ ಅದು ತಪ್ಪು ಮತ್ತು ಸರಿ ಎಂದು ನಾನು ಹೇಳುತ್ತೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಅಫಿಡಾವಿಟ್ ತಯಾರಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಅದರಲ್ಲಿ ಬರೆದ ಎಲ್ಲಾ ವಿಚಾರಗಳು ನನ್ನ ಸ್ವಂತ ಹೇಳಿಕೆಯ ಮೇಲೆ ಬರೆಯಲಾಗಿದೆ. ನಾನು ತಾರಾಬಾಯಿರವರ ಮನೆಯಲ್ಲಿ ಬಾಡಿಗೆಗೆ ಇದ್ದ ಕಾರಣ ನನಗೆ ಅವರ ಕುಟುಂಬದ ಸಂಪೂರ್ಣ ಮಾಹಿತಿ ಇದೆ ಎಂದರೆ ಸಾಕ್ಷಿ ಅವರ ಮನೆಯಲ್ಲಿದ್ದ ಐದು ಜನರ ಬಗ್ಗೆ ಮಾಹಿತಿ ಇದೆ ಎದು ನುಡಿಯುತ್ತಾರೆ. ಆರ್. ಡಿ. ನಾಯಕ, ಗೀತಾ, ಅವರ ಮಗಳು ರಾಜೇಶ್ವರಿ, ಶರತ್ ಎನ್ನುವವರ ಮಾಹಿತಿ ಇದೆ. ರಾಜೇಶ್ವರಿ ತಾರಾಬಾಯಿಯ ಮೊಮ್ಮಗಳು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಆಕೆ ತಾರಾಬಾಯಿಯ ಮನೆಯಲ್ಲಿದ್ದರು ಎಂದು ನುಡಿಯುತ್ತಾರೆ. ರಾಜೇಶ್ವರಿ ಯಾರು ಎನ್ನುವ ಕುರಿತು ನಾನು ವಿಚಾರಣೆ ಮಾಡಿರುವುದಿಲ್ಲ. ಆರ್. ಡಿ. ನಾಯಕ ಗೀತಕ್ಕ ಅಂದರೆ ಪ್ರತಿವಾದಿಯ ಗಂಡನಾಗಿರುತ್ತಾನೆ.

ನಾನು ತಾರಾಬಾಯಿಯ ಮನೆಯಲ್ಲಿ 1993 ರಿಂದ 2000 ದವರೆಗೆ ಬಾಡಿಗೆಗೆ ಇದ್ದೆ. ತಾರಾಬಾಯಿಯ ಗಂಡ ಮಿಲಿಟರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಆ ರೀತಿ ತಾರಾಬಾಯಿ ನನಗೆ ಹೇಳುತ್ತಿದ್ದರು, ನನಗೆ ಅವರ ಪರಿಚಯ ಇಲ್ಲ ಎಂದು ನುಡಿಯುತ್ತಾರೆ. ತಾರಾಬಾಯಿಯ ಗಂಡ ನಂತರ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರಿಗೂ ಕೂಡ ಸಂಬಳ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಆಕೆಯ ಗಂಡ ಸತ್ತ ಮೇಲೆ ಪೆನ್ಶನ್ ತಾರಾಬಾಯಿ ಪಡೆಯುತ್ತಿದ್ದರು ಎಂದರೆ ಸಾಕ್ಷಿ ಪೆನ್ಶನ್ ಬರುತ್ತಿತ್ತು ಆದರೆ ಯಾವ ಇಲಾಖೆಯಿಂದ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರು ಸೈನ್ಯದಲ್ಲಿ ಕೆಲಸ ಮಾಡಿದ್ದರಿಂದ ಸರ್ಕಾರದವರು ದಾವಾ ಆಸ್ತಿಯನ್ನು ಅವರಿಗೆ ಮಂಜೂರು ಮಾಡಿದ್ದರು ಎಂದರೆ ಸಾಕ್ಷಿ ಈ ಕುರಿತು ನನಗೆ ತಾರಾಬಾಯಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಗಂಡ ಸತ್ತ ಮೇಲೆ ಸ್ವದ್ರಿ ಆಸ್ತಿ ತಾರಾಬಾಯಿ ಮತ್ತು ಆಕೆಯ ಕುಟುಂಬದವರಿಗೆ ವರ್ಗಾವಣೆಗೊಂಡಿರುತ್ತದೆ ಎಂದರೆ ಸರಿ .

ತಾರಾಬಾಯಿ ವಿಲ್ ನಾಮೆ ಬರೆಯುವಾಗ ಯಾವ ಜಾಗದ ಕುರಿತು ವಿಲ್ ನಾಮೆ ಬರೆಯುತ್ತಿದ್ದೀರಾ ಎಂದು ಕೇಳಿದ್ದೀರಾ ಎಂದರೆ ಸಾಕ್ಷಿ ಆಕೆ ತಾನು ಇದ್ದ ಜಾಗದ ಬಗ್ಗೆ ವಿಲ್ ನಾಮೆ ಬರೆಯುತ್ತಿರುವುದಾಗಿ ಹೇಳಿದ್ದಾಗಿ ನುಡಿಯುತ್ತಾರೆ. ಅದು ಅರಣ್ಯ ಇಲಾಖೆಯ ಜಮೀನು ಆದ ಕಾರಣ ಅದನ್ನು ವಿಲ್ ನಾಮೆ ಮಾಡಲು ಬರುವುದಿಲ್ಲ

ಎಂದು ನಾನು ತಾರಾಬಾಯಿಗೆ ಹೇಳಿರುವುದಿಲ್ಲ. ಆ ವಿಚಾರ ಗೊತ್ತಿದ್ದರೂ ಕೂಡ ಪ್ರತಿವಾದಿಯ ಮಾತನ್ನು ಕೇಳಿ ಆ ರೀತಿಯ ಮಾಹಿತಿಯನ್ನು ನಾನು ತಾರಾಬಾಯಿಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ. 1 ರ ವಿಲ್ ನಾಮೆಯನ್ನು ಯಾವ ದಿನಾಂಕದಂದು ತಯಾರಿಸಲಾಯಿತು ಎಂದು ನನಗೆ ಗೊತ್ತಿಲ್ಲ. ನಿಡಿ . 1 ರಲ್ಲಿ ಏನೇನು ಬರೆಯಲಾಗಿದೆ ಎನ್ನುವ ಮಾಹಿತಿ ನನಗೆ ಇದೆ. ವಿಲ್ ನಾಮೆ ತಯಾರಿಸುವ ಸಮಯದಲ್ಲಿ ನಾನು ಅವರ ಮನೆಯಲ್ಲಿ ಬಾಡಿಗೆಗೆ ಇದ್ದ ಕಾರಣ ವಿಲ್ ನಾಮೆಯನ್ನು ತಯಾರಿಸುವ ಬಗ್ಗೆ ತಾರಾಬಾಯಿ ನನಗೆ ಮಾಹಿತಿ ನೀಡಿದ್ದರು. ವಿಲ್ ನಾಮೆಯನ್ನು ಬರೆದು ಆದ ಮೇಲೆ ಸಾಕ್ಷಿದಾರರನ್ನು ತಾರಾಬಾಯಿಯವರು ಕರೆಸಿರುತ್ತಾರೆ. ವಿಲ್ ನಾಮೆಯನ್ನು ನನ್ನ ಮುಂದೆಯೇ ತಾರಾಬಾಯಿ ಬರೆಸಿರುತ್ತಾರೆ. ಆ ಸಮಯದಲ್ಲಿ ನಾನು, ಎಸ್. ವಿ. ನಾಯಕ, ಆರ್. ಡಿ. ನಾಯಕ, ಆರ್. ಎನ್. ನಾಯಕ ಹಾಜರಿದ್ದರು.

ತಾರಾಬಾಯಿಗೆ ಆಕೆಗೆ ಗಂಡನ ಪೆನ್ಶನ್ ಬರುತ್ತಿದ್ದ ಕಾರಣ ಆಕೆ ಆರಾಮಾಗಿ ಜೀವನ ನಡೆಸುತ್ತಿದ್ದಳು ಎಂದರೆ ಸರಿ. ಆಕೆಗೆ ಯಾರ ಸಹಾಯವೂ ಬೇಕಿರಲಿಲ್ಲ ಎಂದರೆ ಸಾಕ್ಷಿ ಆಕೆಯನ್ನು ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ತಾರಾಬಾಯಿಗೆ ಪೆನ್ಶನ್ ಬರುತ್ತಿದೆ ಎನ್ನುವ ಕಾರಣಕ್ಕಾಗಿ ಪ್ರತಿವಾದಿ ತಾರಾಬಾಯಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಪ್ರತಿವಾದಿ ತಾರಾಬಾಯಿಯ ಹಣದಿಂದ ಆಕೆಯ ತೋಟ ಮತ್ತು ಮನೆಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಆಕೆ ಆರ್. ಡಿ. ನಾಯಕ ರವರ ಹಣದಿಂದ ತಾರಾಬಾಯಿಯ ತೋಟ ಮತ್ತು ಮನೆಯನ್ನು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಆ ರೀತಿ ಆರ್. ಡಿ. ನಾಯಕ ರವರು ಹಣವನ್ನು ಖರ್ಚು ಮಾಡುತ್ತಿದ್ದಾರೆ ಎಂದು ಪ್ರತಿವಾದಿ ನನಗೆ ಹೇಳುತ್ತಿದ್ದರು. ತಾರಾಬಾಯಿ ತನ್ನ ಇನ್ನೊಬ್ಬ ಮಗಳಾದ ಸುಮನಾರಿಗೆ ಈ ರೀತಿ ಹಣ ಖರ್ಚು ಮಾಡುತ್ತಿದ್ದ ವಿಚಾರ ತಿಳಿಸುತ್ತಿದ್ದರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸುಮನಾಳ ಮಗಳು 1 ನೇ ವಾದಿ ಎಂದರೆ ಸರಿ . ತಾರಾಬಾಯಿ ತನ್ನ ಪೆನ್ಶನ್ ಹಣವನ್ನು ಏನು ಮಾಡುತ್ತಾಳೆ ಎಂದು ನನಗೆ ಯಾವತ್ತೂ ಹೇಳಿರುವುದಿಲ್ಲ. ತಾರಾಬಾಯಿಯ ಪೆನ್ಶನ್ ಹಣ ತೆಗೆದುಕೊಂಡು ಆಸ್ತಿಯ ಖರ್ಚನ್ನು ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಎಲ್ಲಾ ಖರ್ಚನ್ನು ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ತಾರಾಬಾಯಿ ವಿಲ್‌ನಾಮೆ ಮಾಡುವಾಗ ಆಕೆಗೆ 72 ವರ್ಷ ಆಗಿರಬಹುದು. ನಿಡಿ. 1 ರ ವಿಲ್ ನಾಮೆಯಲ್ಲಿ ಆಕೆಯ ವಯಸ್ಸನ್ನು 72 ಎಂದು ಬರೆಸಿರುತ್ತಾರೆ. ವಿಲ್‌ನಾಮೆಯಲ್ಲಿ ಆಕೆಯ ವಯಸ್ಸು 78 ಎಂದು ಬರೆಸಿದ್ದು ನನಗೆ ಅದರ ಯಾವದೇ ಮಾಹಿತಿ ಇಲ್ಲದಿದ್ದ ಕಾರಣ ಆಕೆಯ ವಯಸ್ಸು 72 ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಲ್‌ನಾಮೆ ಮಾಡಲಾಗಿದೆ ಎನ್ನುವ ಸಮಯದಲ್ಲಿ ತಾರಾಬಾಯಿ ವಯೋವೃದ್ಧ ಸಮಸ್ಯೆಯಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ಆಕೆಯ ಸಂಪೂರ್ಣ ಚಾಕರಿಯನ್ನು ಸುಮನಾ ಮತ್ತು 1 ನೇ ವಾದಿ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ನನಗೆ ಪ್ರತಿವಾದಿ ಕರೆದಿರುತ್ತಾರೆ. ನನಗೆ ಪ್ರತಿವಾದಿ ಸಂಬಂಧಿಕರಾಗಬೇಕು ಎಂದರೆ ಸರಿಯಲ್ಲ. ನಾನು ಅವರ ಮನೆಯಲ್ಲಿ ಕುಳಿತುಕೊಂಡಿದ್ದಾಗ ಅವರ ಮನೆಯ ಕುರಿತು ಮಾಹಿತಿಯನ್ನು ಪ್ರತಿವಾದಿ ನನಗೆ ಹೇಳುತ್ತಿದ್ದರು. ನನ್ನ ಸಾಕ್ಷ್ಯದ ಎಲ್ಲಾ ವಿಚಾರವನ್ನು ಪ್ರತಿವಾದಿ ನನಗೆ ಹೇಳಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸುಮನಾಗೆ ಆಸ್ತಿಯಲ್ಲಿ ಪಾಲು ಕೊಡಬೇಕಾಗುತ್ತದೆ ಎಂದು ಪ್ರತಿವಾದಿ ತಯಾರಿಸಿದ ಸುಳ್ಳು ವಿಲ್‌ನಾಮೆಯ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಾರಾಬಾಯಿಗೆ ಆ ವಯಸ್ಸಿನಲ್ಲಿ ಮಾನಸಿಕ ಸ್ಥಿತಿಗತಿ ಸರಿ ಇರದಿದ್ದ ಕಾರಣ ವಿಲ್ ನಾಮೆ ಬರೆಯುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಗ್ಯವಂತರಾಗಿದ್ದರು ಎಂದು ಪ್ರತಿವಾದಿ ಹೇಳಿದ ಮೇರೆಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಷದ್ರಿ ವಿಲ್ ನಾಮೆಗೆ ಯಾವ ದಿನಾಂಕದಂದು ಸಹಿ ಮಾಡಿದ್ದೇನೆ ನೆನಪಿಲ್ಲ. ಷದ್ರಿ ಸಹಿಯನ್ನು ತಾರಾಬಾಯಿಯ ಮನೆಯಲ್ಲಿ ಮಾಡಿರುತ್ತೇನೆ. ನಿಡಿ. 1 ರಲ್ಲಿರುವ ನಿಡಿ. 1 ಎ ಸಹಿಗೂ ಮತ್ತು ನಿಡಿ. 1 ಐ, ಎಚ್, ಜಿ ಸಹಿಗಳಿಗೂ ಸಮಯದ ಅಂತರ ಕಂಡು ಬರುತ್ತದೆ ಎಂದರೆ ಸರಿಯಲ್ಲ. ನಾನು ಷದ್ರಿ ದಾಖಲೆಗೆ ವಿಲ್ ನಾಮೆ ಬರೆಯುವ ಸಮಯದಲ್ಲಿ ಸಹಿ ಮಾಡಿದ್ದು ಇರುವುದಿಲ್ಲ ಮತ್ತು ಅದರಲ್ಲಿ ಸಹಿ ಮಾಡಿದ ಎಲ್ಲಾ ಸಾಕ್ಷಿದಾರರು ಮೃತಪಟ್ಟ ಕಾರಣ ಇತ್ತೀಚಿಗೆ ನನ್ನ ಸಹಿಯನ್ನು ಅದಕ್ಕೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಹಿಯನ್ನು ಷದ್ರಿ ದಾಖಲೆಗೆ ಇತ್ತೀಚಿಗೆ ಮಾಡಿದ್ದು ಕಂಡು ಬರುತ್ತದೆ ಎಂದರೆ ಸರಿಯಲ್ಲ. ಆಗಲೇ ಸಹಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ವಾದಿಯರಿಗೆ ಆಸ್ತಿಯಲ್ಲಿ ಪಾಲು ಸಿಗಬಾರದು ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ತಾರಾಬಾಯಿ ಸತ್ತ ಮಾಹಿತಿ ನನಗೆ ಗೊತ್ತಾಗಿರುವುದಿಲ್ಲ. ಆಕೆ ಸತ್ತಿರುವುದು ನನಗೆ ಒಂದು ತಿಂಗಳ ಹಿಂದೆ ಗೊತ್ತಾಗಿರುತ್ತದೆ. ಸಾಕ್ಷಿ ಮುಂದುವರಿದು ನಾನು ಹೊನ್ನಾವರದ ಕಡೆಗೆ ಹೆಚ್ಚಾಗಿ ಬರುವುದಿಲ್ಲ ಎಂದು ನುಡಿಯುತ್ತಾರೆ. ತಾರಾಬಾಯಿ ಮೃತಪಟ್ಟ ವಿಚಾರವನ್ನು ಪ್ರತಿವಾದಿ ನನಗೆ ತಿಳಿಸಿರುವುದಿಲ್ಲ. ತಾರಾಬಾಯಿ ಮೃತಪಟ್ಟಿದ್ದಾರೆ ವಿಲ್ ನಾಮೆಯ ಬಗ್ಗೆ ಸಾಕ್ಷಿ ಹೇಳಿ ಎಂದು ನನಗೆ ಪ್ರತಿವಾದಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ತಾರಾಬಾಯಿಯ ಗಂಡ ನನಗೆ ಪರಿಚಯ ಇದ್ದಾರೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಲ್ ನಾಮೆ ಮಾಡುವ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ, ಅದಕ್ಕೆ ನಾನು ಸಹಿ ಮಾಡಿದ್ದು ಇರುವುದಿಲ್ಲ ಮತ್ತು ಪ್ರತಿವಾದಿಯ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ತಾರಾಬಾಯಿಯ ಎರಡನೇ ಮಗಳಾದ ಸುಮನಾರಾ ಗಂಡ ಉತ್ತಮವಾದ ಉದ್ಯೋಗದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆತ 1 ನೇ ವಾದಿಯ ಮುಖಾಂತರ ತಾರಾಬಾಯಿಗೆ ಮನೆ ಮತ್ತು ಜಮೀನನ್ನು ನೋಡಿಕೊಳ್ಳಲು ಹಣವನ್ನು ಕೊಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಅದೇ ಹಣದಿಂದ ಜಮೀನು ಮತ್ತು ಮನೆಯ ದೇಖರೇಖಿಯನ್ನು ತಾರಾಬಾಯಿ ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ತಾರಾಬಾಯಿಯ ದೇಖರೇಖಿಯನ್ನು ಸುಮನಾ, ರಾಜೇಶ್ವರಿ ಮತ್ತು ಸುಮನಾರ ಗಂಡ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಅವರು ಅವರ ಮನೆಗೆ ಬರುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಸುಮನಾರ ಗಂಡ ಹೊರಗಡೆ ಕೆಲಸ ಮಾಡುತ್ತಿದ್ದ ಕಾರಣ ಪ್ರತಿವಾದಿ ಮತ್ತು ಆಕೆಯ ಗಂಡ ಆಸ್ತಿಯನ್ನು ಪಟಾಯಿಸುವ ಉದ್ದೇಶದಿಂದ ತಾರಾಬಾಯಿಯ ಜೊತೆ ಇದ್ದರು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಇತ್ತೀಚಿಗೆ ನಿಡಿ. 1 ರ ದಾಖಲೆಗೆ ನನ್ನ ಸಹಿಯನ್ನು ಪಡೆದು ಆಸ್ತಿಯನ್ನು ಲಪಟಾಯಿಸಲು ಪ್ರಯತ್ನಿಸುತ್ತಿದ್ದಾರೆ ಎಂದರೆ ಸಾಕ್ಷಿ ನಾನು ವಿಲ್‌ನಾಮೆ ಮಾಡಿದಾಗಲೇ ಸಹಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ಗಂಡ ದುಡಿಯುತ್ತಿದ್ದ ಹಣ ಅವನ ಕುಟುಂಬಕ್ಕೆ ಸಾಲುತ್ತಿರಲಿಲ್ಲ, ಆದ್ದರಿಂದ ಆತ ತಾರಾಬಾಯಿಗೆ ಯಾವದೇ ಹಣಸಹಾಯ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಷದ್ರಿ ವಿಲ್‌ನಾಮೆ ಬರೆದವರು ಮತ್ತು ಇಬ್ಬರು ಸಾಕ್ಷಿದಾರರು ಯಾವಾಗ ಮೃತಪಟ್ಟಿದ್ದಾರೆ ಎಂದು ಗೊತ್ತಾಯಿತೋ ಅದಕ್ಕೆ ನನ್ನ ಸಹಿ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ ಎಂದರೆ ಸರಿಯಲ್ಲ. ಈ ವಿಚಾರ ಗೊತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಾರಾಬಾಯಿಗೆ ದಾವಾ ಆಸ್ತಿಯ ಕುರಿತು ಯಾವದೇ ವಿಲ್ ನಾಮೆ ಮಾಡಲು ಕಾನೂನು ಪ್ರಕಾರ ಸಂಪೂರ್ಣ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಷದ್ರಿ ಆಸ್ತಿ ತಾರಾಬಾಯಿಯ ಗಂಡನಿಗೆ ಸರ್ಕಾರದಿಂದ ಮಂಜೂರಾದ ಕಾರಣ ಆ ಕುರಿತು ವಿಲ್ ನಾಮೆ ಮಾಡಲು ತಾರಾಬಾಯಿಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಎಲ್ಲಾ ಮಾಹಿತಿ ಗೊತ್ತಿದ್ದರೂ ಕೂಡಾ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.